ಅರಣ್ಯ ಭವನ
ಅಶೋಕಪುರಂ, ಮೈಸೂರು
ದೂರವಾಣಿ: 0821-2481159

## ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ವನ್ಯಜೀವಿ ವಿಭಾಗ, ಮೈಸೂರು

ಸಂಖ್ಯೆ: ಎ1/ಬಿಯುಡಿ/ಸಿಆರ್-36/2018-19 ದಿನಾಂಕ: 01.08.2019

# ಅಲ್ಪಾವಧಿ ಮರುಟೆಂಡರ್ ಪ್ರಕಟಣೆ (3ನೇ ಕರೆ)

ಮೈಸೂರು ವನ್ಯಜೀವಿ ವಿಭಾಗದ ವ್ಯಾಪ್ತಿಗೆ ಬರುವ, ವನ್ಯಜೀವಿ ವಲಯದ ರಂಗನತಿಟ್ಟು ಪಕ್ಷಿಧಾಮದಲ್ಲಿರುವ ವಿವಿಧ ಬಗೆಯ ಉದ್ಯಾನವನಗಳನ್ನು 2019-20ನೇ ಸಾಲಿನಲ್ಲಿ ನಿರ್ವಹಣೆ ಮಾಡುವುದಕ್ಕೆ ಸಂಬಂಧಿಸಿದಂತೆ (ಷೆಡ್ಯೂಲ್‌ನಲ್ಲಿ ನಮೂದಿಸಿರುವಂತೆ) ಈ ವಿಭಾಗದಲ್ಲಿ ಅರಣ್ಯ ಗುತ್ತಿಗೆದಾರರಾಗಿ ಹೆಸರನ್ನು ನೊಂದಣಿ ಮಾಡಿಸಿರುವ ಅರ್ಹ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರನ್ನು ಅಹ್ವಾನಿಸಿದ್ದು, ಆಸಕ್ತಿವುಳ್ಳ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಿ ಟೆಂಡರ್ ದರಗಳನ್ನು ಸಲ್ಲಿಸಬಹುದಾಗಿರುತ್ತದೆ. http://eproc.karnataka.gov.in

ಟೆಂಡರ್ ಪ್ರಕ್ರಿಯೆಯ ವೇಳಾಪಟ್ಟಿ:-

1. ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ : 14.08.2019 ಅಪರಾಹ್ನ 16.00 ಗಂಟೆಗೆ
2. ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 16.08.2019 ಅಪರಾಹ್ನ 16.10 ಗಂಟೆಗೆ
3. ಆರ್ಥಿಕ ಬಿಡ್ ತೆರೆಯುವ ದಿನಾಂಕ : 17.08.2019 ಪೂರ್ವಾಹ್ನ 11.00 ಗಂಟೆಗೆ

### ಅನುಸೂಚಿ

| ಕ್ರ. ಸಂ. | ಕಾಮಗಾರಿಗಳ ವಿವರ | ವಲಯ | ಕಾಮಗಾರಿಗಳನ್ನು ನಿರ್ವಹಿಸಬೇಕಾದ ಸ್ಥಳ | ಪರಿಮಾಣ | ಅಂದಾಜು ಮೊತ್ತ (ಲಕ್ಷ.ಗಳಲ್ಲಿ) | ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ) | ಕಾಮಗಾರಿ ಮುಕ್ತಾಯಗೊಳಸಲು ನಿಗಧಿಪಡಿಸಿರುವ ಅವಧಿ |
|---|---|---|---|---|---|---|---|
| 1 | 2019-20ನೇ ಸಾಲಿನಲ್ಲಿ ವಿವಿಧ ಬಗೆಯ ಉದ್ಯಾನವನ ನಿರ್ವಹಣೆ ಮಾಡುವುದು- 7 ತಿಂಗಳಿಗೆ (01.09.2019 ರಿಂದ 31.03.2020 ರವರೆಗೆ) | ಮೈಸೂರು ವನ್ಯಜೀವಿ ವಲಯ | ರಂಗನತಿಟ್ಟು ಪಕ್ಷಿಧಾಮ | 167132 ಚ.ಮೀ. | 8.30 | 20750.00 | 31.03.2020 |

ಮೇಲ್ಕಂಡ ಕಾಮಗಾರಿಗಳ ಪ್ರಮಾಣ ಮತ್ತು ಮೊತ್ತವು ಅಂದಾಜಿನದ್ದಾಗಿದ್ದು 2019-20ನೇ ಸಾಲಿಗೆ ಅನುದಾನ ನಿರೀಕ್ಷಿಸಿ ಟೆಂಡರ್ ನಡೆಸಲಾಗಿರುತ್ತದೆ ಹಾಗೂ ಅನುದಾನವು ವ್ಯತ್ಯಯವಾಗುವ ಸಂಭವವಿರುತ್ತದೆ. ನಿಗಧಿತ ಮೊತ್ತವು ಹೆಚ್ಚು-ಕಡಿಮೆಯಾದಲ್ಲಿ ಆ ಪ್ರಕಾರ ಕಾರ್ಯಾದೇಶ ನೀಡಲಾಗುವುದು. ಉಪ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ, ಮೈಸೂರು ರವರು ಯಾವುದೇ ನಿರ್ದಿಷ್ಟ ಕಾರಣಗಳನ್ನು ನಿಯೋಜಿಸದೆ ಟೆಂಡರ್ ಪ್ರಕ್ರಿಯೆಯನ್ನು ರದ್ದು ಪಡಿಸುವ ಹಕ್ಕನ್ನು ಹೊಂದಿರುತ್ತಾರೆ.

### ಷರತ್ತುಗಳು

1. ಅನುಸೂಚಿಯಲ್ಲಿ ನಮೂದಿಸಿರುವ ಕಾಮಗಾರಿಗಳು ಅಂದಾಜಿನದಾಗಿದ್ದು, ಅನುದಾನದ ಲಭ್ಯತೆ ಮತ್ತು ವಾರ್ಷಿಕ ಕ್ರಿಯಾ ಯೋಜನೆಗೆ ಮಂಜೂರಾತಿ ನಿರೀಕ್ಷಿಸಿ ಟೆಂಡರ್ ಕರೆಯಲಾಗಿದೆ. ಅಂತೆಯೇ

ಗುತ್ತಿಗೆದಾರರು/ಬಿಡ್ದುದಾರರು ಅನುಮೋದಿತ ವಾರ್ಷಿಕ ಕ್ರಿಯಾ ಯೋಜನೆ ಮಂಜೂರಾದ ಅಂದಾಜುಪಟ್ಟಿ ಹಾಗೂ ಅನುದಾನ ಲಭ್ಯತೆ ಮೇಲೆ ನಿರ್ವಹಿಸಬೇಕಾಗಿರುತ್ತದೆ. ವಾರ್ಷಿಕ ಕ್ರಿಯಾ ಯೋಜನೆ ಅನುಮೋದನೆ ದೊರೆಯದಿದ್ದಲ್ಲಿ ಅಥವಾ ಅನುದಾನ ಲಭ್ಯವಿಲ್ಲದಿದ್ದ ಪಕ್ಷದಲ್ಲಿ ಕಾಮಗಾರಿಗಳನ್ನು ಬದಲಾಯಿಸಲು, ಪ್ರಮಾಣ ಕಡಿಮೆ ಮಾಡಲು ಅಥವಾ ಇಡಿ ಕಾಮಗಾರಿಯನ್ನು ರದ್ದುಗೊಳಿಸಲು ಈ ಕೆಳಸಹಿದಾರರು ಮತ್ತು ಮೇಲಾಧಿಕಾರಿಗಳು ಅಧಿಕಾರ ಹೊಂದಿರುತ್ತಾರೆ.

2. ಟೆಂಡರ್‌ನಲ್ಲಿ ತಿಳಿಸಿರುವ ಕಾಮಗಾರಿಗಳು ಪೈಕಿ 2019-20ನೇ ಸಾಲಿಗೆ ಪೂರ್ಣಗೊಳಿಸುವ ಕಾಮಗಾರಿಗಳಿಗೆ ಮಾತ್ರ ಹಣ ಪಾವತಿಸಲಾಗುವ್ಯದು. ಹಾಗೂ ಟೆಂಡರ್ ಪ್ರಕ್ರಿಯೆಯು ಸದರಿ ಆರ್ಥಿಕ ವರ್ಷಕ್ಕೆ ಮಾತ್ರ ಚಾಲ್ತಿಯಲ್ಲಿರುತ್ತದೆ.
3. ಯಶಸ್ವಿ ಟೆಂಡರ್‌ದಾರರು ಈ ಕಛೇರಿಯಲ್ಲಿ ಕರಾರು ಒಪ್ಪಂದ ಮಾಡಿಕೊಳ್ಳುವ ವೇಳೆ ಕಾಮಗಾರಿಯ ಮೊತ್ತಕ್ಕೆ ಶೇಕಡಾ 5 ರಷ್ಟನ್ನು ಭದ್ರತಾ ಠೇವಣಿಯಾಗಿ ಈ ಕೆಳಸಹಿದಾರರ ಹೆಸರಿನಲ್ಲಿ ನೀಡಬೇಕು.
4. ಟೆಂಡರ್‌ದಾರರು ಟೆಂಡರ್‌ನಲ್ಲಿ ಭಾಗವಹಿಸಿ, ಷರತ್ತುಗಳಿಗೆ ಸಂಬಂಧಪಟ್ಟ ದಾಖಲಾತಿಗಳನ್ನು ಇ-ಪೋರ್ಟಲ್ ಮುಖಾಂತರ ಅಪಲೋಡ್ ಮಾಡದೇ ಇದ್ದು, ಟೆಂಡರ್ ತಿರಸ್ಕೃತಗೊಂಡಲ್ಲಿ, ಷರತ್ತುಗಳ ಬಗ್ಗೆ ಗೊತ್ತಿಲ್ಲವೆಂದು ಅಥವಾ ಬೇರೆ ಯಾವುದೇ ಕಾರಣಗಳನ್ನು ನೀಡುವಂತಿಲ್ಲ.
5. ಟೆಂಡರ್‌ನಲ್ಲಿ ಭಾಗವಹಿಸುವ ಗುತ್ತಿಗೆದಾರರು ಪ್ರತಿ ಕಾಮಗಾರಿಯ ಒಟ್ಟು ಮೊತ್ತಕ್ಕೆ ಇ-ಪೋರ್ಟಲ್‌ನಲ್ಲಿ ನಮೂದಿಸಿದಂತೆ ಶೇಕಡವಾರು ದರಗಳನ್ನು ಮಾತ್ರ ನಮೂದಿಸುವುದು.
6. ಟೆಂಡರ್‌ನಲ್ಲಿ ಭಾಗವಹಿಸುವ ಗುತ್ತಿಗೆದಾರರು ಸಂಬಂಧಪಟ್ಟ ಕಾಮಗಾರಿಗೆ Workdone Certificates ಗಳನ್ನು ಲಗತ್ತಿಸಿ ಸಲ್ಲಿಸಬೇಕು.
7. ಟೆಂಡರ್‌ದಾರರು ಕಡ್ಡಾಯವಾಗಿ ಲೇಬರ್ ಆಕ್ಟನ ನಿಯಮಗಳನ್ನು ಪಾಲಿಸತಕ್ಕದ್ದು.
8. ಟೆಂಡರ್‌ದಾರರು ಕಡ್ಡಾಯವಾಗಿ ಜಿಎಸ್‌ಟಿ ಯಲ್ಲಿ ನೊಂದಣಿಯಾಗಿರಬೇಕು (Submit GSTIN Number in tender)
9. ತಪ್ಪಿತಸ್ಥ, ಅಪ್ರಾಪ್ತ ವಯಸ್ಕರು, ಕಾನೂನಿನ ರೀತ್ಯ ಅನರ್ಹರಾದ ವ್ಯಕ್ತಿಗಳು ಟೆಂಡರ್‌ನಲ್ಲಿ ಭಾಗವಹಿಸಲು ಅವಕಾಶ ಇರುವುದಿಲ್ಲ.
10. ತಾಂತ್ರಿಕ ಬಿಡ್ ಪರಿಶೀಲನೆ ಸಮಯದಲ್ಲಿ ಪ್ರಸ್ತುತ ಟೆಂಡರ್‌ನಲ್ಲಿ ನಮೂದಿಸಿರುವ ದಾಖಲಾತಿಗಳಲ್ಲದೇ, ಇನ್ನಿತರೆ ದಾಖಲಾತಿಗಳ ಅವಶ್ಯಕತೆ ಕಂಡು ಬಂದಲ್ಲಿ ಈ ಕಛೇರಿಯಿಂದ ಸದರಿ ದಾಖಲಾತಿಗಳನ್ನು ಒದಗಿಸಲು ಸೂಚಿಸಲಾಗುವುದು. ಸದರಿ ದಾಖಲಾತಿಗಳನ್ನು ಒದಗಿಸಿದ ನಂತರ ಅರ್ಹರಿದ್ದಲ್ಲಿ ಮಾತ್ರ ಆರ್ಥಿಕ ಬಿಡ್‌ನಲ್ಲಿ ಭಾಗವಹಿಸುವ ಅವಕಾಶ ನೀಡಲಾಗುವುದು.
11. ಟೆಂಡರ್ ಪ್ರಕಟಣೆಯ ಯಾವುದೇ ನಿಯಮವನ್ನು ಉಲ್ಲಂಘಿಸಿದಲ್ಲಿ ಮರು ಟೆಂಡರ್ ಕರೆಯುವ ಹಾಗೂ ಯಾವುದೇ ಕಾರಣವನ್ನು ಕೊಡದೇ ಟೆಂಡರ್‌ನ್ನು ರದ್ದುಪಡಿಸುವ ಅಧಿಕಾರವನ್ನು ಕಾಯ್ದಿರಿಸಿಕೊಳ್ಳಲಾಗಿದೆ.
12. ವಿಜೇತ ಟೆಂಡರ್‌ದಾರರ ಆರ್ಥಿಕ ಜವಾಬ್ದಾರಿಯಲ್ಲಿ ಮರು ಟೆಂಡರ್ ಕರೆದು, ಇಲಾಖೆಗೆ ಆರ್ಥಿಕ ನಷ್ಟ ಉಂಟಾದರೆ ಮೂಲ ವಿಜೇತ ಟೆಂಡರ್‌ದಾರರು ಕಟ್ಟಿಕೊಡಬೇಕಾಗುವುದು.
13. ಈ ಕ್ರಮದಿಂದ ಇಲಾಖೆಗೆ ಆಗಬಹುದಾದ ನಷ್ಟವನ್ನು ಮೂಲ ವಿಜೇತ ಟೆಂಡರ್‌ದಾರರು ಕಟ್ಟಿಕೊಡಲು ವಿಫಲರಾದರೆ ಸದರಿ ಮೊತ್ತವನ್ನು ಕರ್ನಾಟಕ ಅರಣ್ಯ ಕಾಯಿದೆ 1963 ರ ಕಲಂ. 109 ಮತ್ತು 119 ರಂತೆ ಭೂ ಕಂದಾಯ ಬಾಕಿ ರೂಪದಲ್ಲಿ ವಸೂಲಿ ಮಾಡಲು ಕ್ರಮ ಕೈಗೊಳ್ಳಲಾಗುವುದು. ಇಂತಹ ಗುತ್ತಿಗೆದಾರರು/ಸಂಸ್ಥೆಯನ್ನು ತಪ್ಪಿತಸ್ಥರೆಂದು ಪರಿಗಣಿಸಿ ಮುಂದಿನ ಯಾವುದೇ ಟೆಂಡರ್‌ನಲ್ಲಿ ಭಾಗವಹಿಸಲು ಅವಕಾಶ ನೀಡಲಾಗುವುದಿಲ್ಲ ಮತ್ತು ಅವರ ಹೆಸರನ್ನು ಕಪ್ಪು ಪಟ್ಟಿಯಲ್ಲಿ ಸೇರಿಸಲಾಗುವುದು.
14. ಕಾಮಗಾರಿಗಳ ತಾಂತ್ರಿಕ ಹಾಗೂ ಷರತ್ತುಗಳ ಹೆಚ್ಚಿನ ಮಾಹಿತಿಗಾಗಿ ಈ ಕೆಳಸಹಿದಾರರ ಕಛೇರಿ ವೇಳೆಯಲ್ಲಿ ಭೇಟಿ ನೀಡಿ ಪಡೆಯಬಹುದಾಗಿರುತ್ತದೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ
ವನ್ಯಜೀವಿ ವಿಭಾಗ, ಮೈಸೂರು